<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ ಸಿ ಸಂಃ 613-2019**

| | | |
|---|---|---|
| ಸಾಕ್ಷಿಯ ಹೆಸರುಃ | ಮೋಹನ್ | ಪ್ರಾಸಾಃಃ 01 |
| ತಂದೆ/ಗಂಡನ ಹೆಸರುಃ | ಈರಯ್ಯ | ಚಾಸಾಃಃ 04 |
| ವಯಸ್ಸುಃ | ವರ್ಷ 26 | ಪ್ರಮಾಣೀಕರಿಸಿದ ದಿಃ 14.10.2019 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಬೆಟ್ಟದಪುರ ಗ್ರಾಮ | ಪಿರಿಯಾಪಟ್ಟಣ ತಾಲ್ಲೂಕು |

<u>ಮುಖ್ಯ ವಿಚಾರಣೆಃ ಹಿಸಸಅ ರಿಂದಃ</u>

ಆರೋಪಿತರ ಪರಿಚಯವಿಲ್ಲ. ಸದರಿ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ಚಾಸಾ-01 ರಿಂದ 03 ರವರ ಪರಿಚಯವಿಲ್ಲ. ಆರೋಪಿ ಅಕ್ರಮವಾಗಿ ಸರ್ಕಾರದಿಂದ ವಿತರಣೆಯಾದ ಅಕ್ಕಿ, ರಾಗಿ, ಗೋದಿ ಯನ್ನು ಕಾಳ ಸಂತೆಯಲ್ಲಿ ಜನರಿಂದ ಕಡಿಮೆ ಬೆಲೆಗೆ ಕೊಂಡು ಸಂಗ್ರಹಿಸಿದ್ದ ವಿಷಯ ನನಗೆ ಗೊತ್ತಿಲ್ಲ. ಆ ಸಂಬಂಧ ಚಾಸಾ-1 ರಿಂದ 03 ರವರು ನನ್ನನ್ನು ಯಾವತ್ತೂ ಸಹ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ಯಾವುದೇ ದಾಳಿ ಮಾಡಿಲ್ಲ. ಹಾಗೂ ಯಾವುದೇ ಅಕ್ಕಿ, ಗೋದಿ ಹಾಗೂ ರಾಗಿಯನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ. ಹಾಗೂ ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿಲ್ಲ. ಈ ಬಗ್ಗೆ ನಾನು ಪೊಲೀಸ್‌ರ ಮುಂದೆ ಹೇಳಿಕೆ ನೀಡಿಲ್ಲ.

ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ.ಪಿ.01 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ.01 (ಬಿ) ಎಂದು ಗುರುತಿಸಲಾಯಿತು. ನಾನು ಅತ್ತಿಗೂಡಿನಲ್ಲಿದ್ದಾಗ ಸುಮಾರು 03 ವರ್ಷದ ಹಿಂದೆ ಪೊಲೀಸ್ ರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

<u>ಮುಖ್ಯ ವಿಚಾರಣೆಃ ಹಿಸಸಅ ರಿಂದಃ</u>

ದಿಃ 16.06.2016 ರಂದು ಮಃ1.45 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-05 ರವರು ನಮ್ಮೂರಿನ ರಾಮನಾಥಪುರ ರಸ್ತೆಯಲ್ಲಿದ್ದಾಗ ಚಾಸಾ-1 ರಿಂದ 3 ರವರು ಇಲ್ಲಿಗೆ ಬಂದು ಈ ಕೇಸಿನ ಆರೋಪಿ ಸರ್ಕಾರದಿಂದ ವಿತರಣೆಯಾಗುವ ಅಕ್ಕಿ, ರಾಗಿ ಮತ್ತು ಗೋದಿಯನ್ನು ಅಕ್ರಮವಾಗಿ ಕಾಳ ಸಂತೆಯಲ್ಲಿ ಕಡಿಮೆ ಬೆಲೆಗೆ ವಿತರಿಸುತ್ತಿದ್ದಾನೆ ಎಂದು, ಅದಕ್ಕೆ ನೀವು ಪಂಚರರಾಗಬೇಕೆಂದು ಕರೆದಾಗ, ಮ . 2.45 ಗಂಟೆ ಸಮಯದಲ್ಲಿ ಹೋಗಿ ನೋಡಲಾಗಿ ಅಲ್ಲಿ ಈ ಕೇಸಿನ ಆರೋಪಿ ಬೊಲ್ಯಾರೋ ಗೂಡ್ಸ್ ವಾಹನದಿಂದ ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಚೀಲಗಳನ್ನು ಇಳಿಸುತ್ತಿದ್ದು, ಆಗ ಚಾಸಾ-1 ರಿಂದ 3 ರವರು

ನಮ್ಮೊಮದಿಗೆ ತಕ್ಷಣ ವಾಹನದ ಬಳಿ ಹೋಗಿ ಆರೋಪಿಯನ್ನು ಸುತ್ತುವರೆದು ಹಿಡಿದು ಆತನ ಹೆಸರು ವಿಳಾಸ ವಿಚಾರಿಸಿ ನಂತರ ವಾಹನವನ್ನು ಪರಿಶೀಲಸಿದಾಗ ಅದರಲ್ಲಿ 13 ಕೊರೆ ಚೀಲ ಅಕ್ಕಿ, 11 ಕೊರೆ ಚೀಲ ಗೋಧಿ ಇರುವುದು ಕಂಡು ಬಂದಿರುತ್ತದೆ. ನಂತರ ಆತನ ಮನೆಯ ಒಳಗೆ ಹೋಗಿ ನೋಡಲಾಗಿ ಅಲ್ಲಿ 11 ಚೀಲ ಅಕ್ಕಿ, 16 ಚೀಲ ಗೋಧಿ , 2 ಎಲೆಕ್ಟಾನಿಲ್ ಯಂತ್ರಗಳು ಇರುವುದು ಕಂಡು ಬಂದಿದ್ದು, ಈ ಬಗ್ಗೆ ಕೇಳಲಾಗಿ ಈ ದಾಸ್ತಾನು ಮಾಡಲು ರಹದ್ದಾರಿ ಇದೆಯ ಎಂದು ಕೇಳಲಾಗಿ ಆರೋಪಿಇಲ್ಲ ಎಂದು ನುಡಿದಿದ್ದು, ಸದರಿ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು ಅದನ್ನು ಚಾಸಾ-1 ರವರು ತೂಕ ಮಾಡಲಾಗಿ ವಾಹನದಲ್ಲಿದ್ದ ಅಕ್ಕಿ 6 ಕ್ವಿಂಟರ್ 79 ಕೆ.ಜಿ. ಇದ್ದು, ಮತ್ತು 4 ಕಿವಂಟಲ್ ಗೋಧಿ ಇದ್ದು, ನಂತರ ಮನೆಯಲ್ಲಿದ್ದ ಅಕ್ಕಿ ಮತ್ತು ಗೋಧಿಯನ್ನು ತೂಕ ಮಾಡಲಾಗಿ 6 ಕ್ವಿಂಟರ್ ಇದ್ದು, ಮತ್ತು 5 ಕಿವಂಟಲ್ ಗೋಧಿ ಇರುವುದು ಕಂಡು ಬಂದಿರುತ್ತದೆ ಮತ್ತು ಬೊಲ್ಯಾರೋ ವಾಹನದ ನಂ. ಕೆಎ 14-5541 ಆಗಿರುತ್ತದೆ. ನಂತರ ಸದರಿ ಅಕ್ಕಿ ಮತ್ತು ಗೋಧಿಯಿಂದ ಸ್ಯಾಂಪಲ್ಗಾರಿ ತಲಾ 1/2 ಕೆ.ಜಿ ಯಂತೆ 4 ಪ್ಯಾಕೆಟ್ಗಳಲ್ಲಿ ಪಡೆದು ಬಿಚಿ ಬಟ್ಟೆಯಲ್ಲಿ ಸುತ್ತಿ ಪಿ ಆರ್ ಓ ಎಂದು ಗುರುತಿಸಿ, ನಂತರ ಸ್ವತ್ತನ್ನು ಮುಂದಿನ ಕ್ರಮಕ್ಕಾಗಿ ಈಗ ಓದಿಸಿ ಕೇಳಿಸಿಕೊಂಡ ನಿ.ಪಿ.01 ರಂತೆ ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿಯೇ ನಿ.ಪಿ.01 ಕ್ಕೆ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈ ಘಟನೆಯ ಬಗ್ಗೆ ಈಗ ಓದಿಸಿ ಕೇಳಿ ಸಿಕೊಂಡ ನಿ.ಪಿ.01 ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಸಿ ಎಸ್ ಎಂ ವಕೀಲರಿಂದಃ**

ಇಲ್ಲ.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**